4

संयुक्त कर्नाटक/हुबली
SAMYUKTHA KARNATAKA/HUBLI
28 MAY 2018

# ಗದಗ ರೈಲು ನಿಲ್ದಾಣದಲ್ಲಿ ಹೆಚ್ಚಿದ ಕಳ್ಳರ ಕೈಚಳಕ

**ಸೂರ್ಯನಾರಾಯಣ ನರಗುಂದಕರ**
**ಸಂ.ಕ.ಸಮಾಚಾರ, ಗದಗ :**
ಗದಗರೈಲು ನಿಲ್ದಾಣದಲ್ಲಿ ಕಳ್ಳರ ಕೈಚಳಕ ಹೆಚ್ಚಿದ್ದು ಪ್ರತಿನಿತ್ಯ ಪ್ರಯಾಣಿಕರು ಹಣ, ಚಿನ್ನದಾಭರಣ, ಸೂಟಕೇಸಗಳನ್ನು ಕಳೆದುಕೊಂಡು ಪರದಾಡುತ್ತಿದ್ದಾರೆ.

ರೈಲು ನಿಲ್ದಾಣದಲ್ಲಿ ಒಮ್ಮೆಲೆಎರಡು ಮೂರು ರೈಲುಗಳು ಬಂದಾಗ ಕಳ್ಳರು ತಮ್ಮ ಕೈಚಳಕ ತೋರುತ್ತಿದ್ದಾರೆ. ಹಣ ಕಳೆದುಕೊಂಡ ಪರಸ್ಥಳದ ಪ್ರಯಾಣಿಕರು ತಮ್ಮ ಹಣೆ ಬರಹವನ್ನು ಶಪಿಸುತ್ತ ಸಾಗುವುದು ದಿನನಿತ್ಯದ ಸಂಗತಿಯಾಗಿದೆ.

ಗದಗರೈಲು ನಿಲ್ದಾಣದಲ್ಲಿ ಪ್ರತಿ ನಿತ್ಯ ಕಳ್ಳರ ಕೈಚಳಕಕ್ಕೆ ಬಲಿಯಾಗುತ್ತಿದ್ದರೂ ಸಹ ಪೊಲೀಸ್ ಠಾಣೆಗೆ ದೂರು ಸಲ್ಲಿಸುವ ಸಾಹಸಕ್ಕೆ ಯಾರೂ ಕೈ ಹಾಕುತ್ತಿಲ್ಲ. ಪೊಲೀಸ್ ಠಾಣೆಗೆ ದೂರು ಸಲ್ಲಿಸಿದಲ್ಲಿ ಪೊಲೀಸ್ ಠಾಣೆಗೆ ಪದೇ ಪದೇ ವಿಚಾರಣೆಗೆ ಹಾಜರಾಗುವುದು, ಪದೇ ಪದೇ ನ್ಯಾಯಾಲಯಕ್ಕೆ ಅಲೆದಾಡುವ ಪ್ರಮೇಯವೇ ಬೇಡವೆಂದು ಪೊಲೀಸರಿಗೆ ದೂರು ಸಲ್ಲಿಸುವ ಗೋಜಿಗೆ ಹೋಗುತ್ತಿಲ್ಲವೆಂದು ಹೇಳಲಾಗಿದೆ.

**ನೆರೆಯ ರಾಜ್ಯಗಳ ಕಳ್ಳರು:**

ಗದಗ ರೈಲು ನಿಲ್ದಾಣದಲ್ಲಿ ನೆರೆಯ ಆಂಧ್ರ, ಮಹಾರಾಷ್ಟ್ರದ ಕಳ್ಳರ ಗ್ಯಾಂಗ್ ಕಾರ್ಯನಿರ್ವಹಿಸುತ್ತಿದೆ. ರೈಲಿನಲ್ಲಿ ಪ್ರಯಾಣಿಕರು ಹತ್ತುವಾಗ, ಇಳಿಯುವಾಗ ಈ ಗ್ಯಾಂಗ್ ನೂಕು ನುಗ್ಗಲು ಸೃಷ್ಟಿಸಿ ತಮ್ಮ ಕೈಚಳಕವನ್ನು ತೋರುತ್ತಿದೆ. ಕಳ್ಳತನ ನಡೆದ ಸಂಗತಿ ಪ್ರಯಾಣಿಕರಿಗೆ ರೈಲಿನಲ್ಲಿ ಕುಳಿತಾಗಲೇ ತಿಳಿಯುತ್ತದೆ. ಅಷ್ಟರಲ್ಲಾಗಲೇ ರೈಲು ಗದಗ ರೈಲು ನಿಲ್ದಾಣವನ್ನು ದಾಟಿರುತ್ತದೆ. ಮುಂದಿನ ರೈಲು ನಿಲ್ದಾಣದಲ್ಲಿ ಪ್ರಯಾಣಿಕರು ಇಳಿದು ಪೊಲೀಸ್ ಠಾಣೆಗೆ ದೂರು ಸಲ್ಲಿಸುವಷ್ಟರಲ್ಲಿಯೇ ರೈಲು ಪ್ರಾರಂಭವಾಗಿರುತ್ತದೆ. ಹೇಗೂ ಸೂಟಕೇಸ್, ಹಣ, ಚಿನ್ನದಾಭರಣಗಳನ್ನು ಕಳೆದುಕೊಂಡಿದ್ದು, ತಮ್ಮ ಸ್ಥಳಕ್ಕೆ ತಲುಪುವ ರೈಲನ್ನು ಸಹ ತಪ್ಪಿಸಿಕೊಳ್ಳುವುದು ಬೇಡವೆಂದು ಬಹುತೇಕ ಪ್ರಯಾಣಿಕರು ದೂರು ಸಲ್ಲಿಸುವ ಗೋಜಿಗೆ ಹೋಗುತ್ತಿಲ್ಲ.

**ಬ್ಲೇಡ್‌ನಿಂದ ಕಿಸೆಗಳ್ಳತನ:**

ಪ್ರಯಾಣಿಕರ ಪ್ಯಾಂಟಿನ ಜೇಬನ್ನು ತಮ್ಮ ಉಗುರುಗಳಲ್ಲಿ ಬ್ಲೇಡ್‌ನ ತುಂಡುಗಳನ್ನು ಹುದುಗಿಸಿಕೊಂಡು ಕಳ್ಳರು ಕತ್ತರಿಸುತ್ತಿದ್ದಾರೆ. ಬ್ಲೇಡನಿಂದ ಪ್ಯಾಂಟಿನ ಜೇಬನ್ನು ಕತ್ತರಿಸುವಾಗ ವ್ಯಕ್ತಿಗೆ ಸ್ವಲ್ಪವೂ ತಿಳಿಯದಂತೆ ಕತ್ತರಿಸಲಾಗುತ್ತಿದೆಯೆಂದು ತಿಳಿದು ಬಂದಿದೆ.

**ಕಳ್ಳಿಯರ ಹಾವಳಿ:**

ಗದಗ ರೈಲು ನಿಲ್ದಾಣದಲ್ಲಿ ಮಹಿಳಾ ಪ್ರಯಾಣಿಕರ ವಸ್ತುಗಳನ್ನು ಪ್ರಯಾಣಿಕರ ಸೋಗಿನಲ್ಲಿ ಪಕ್ಕದಲ್ಲಿ ಕುಳಿತುಕೊಳ್ಳುವ ಮಹಿಳಾ ಕಳ್ಳರು ಎಗರಿಸುತ್ತಿದ್ದಾರೆ. ಈ ಪ್ರಯಾಣಿಕರ ಸೋಗಿನಲ್ಲಿರುವ ಕಳ್ಳಿಯರು ಪಕ್ಕದ ಮಹಿಳೆಯರ ಕೊರಳಲ್ಲಿನ ಸರಗಳು, ಮತ್ತಿತರ ವಸ್ತುಗಳನ್ನು ಅಪಹರಿಸಿ ಶೌಚಕ್ಕೆ ತೆರಳುವ ನೆಪದಲ್ಲಿ ಅಲ್ಲಿಂದ ಪರಾರಿಯಾಗುತ್ತಿದ್ದಾರೆಂದು ತಿಳಿದು ಬಂದಿದೆ.

**ಪೊಲೀಸರ ಅಸಹಾಯಕತೆ:**

ಗದಗ ರೈಲು ನಿಲ್ದಾಣದಲ್ಲಿ ರೈಲುಗಳು ಬಂದ ಸಂದರ್ಭದಲ್ಲಿ ಅನೇಕ ಜನ ಪೊಲೀಸರು ಪ್ಲಾಟ್‌ಫಾರ್ಮನಲ್ಲಿ ಮಫ್ತಿನಲ್ಲಿ ಹಾಗೂ ಸಮವಸ್ತ್ರದಲ್ಲಿ ಸಂಚರಿಸುತ್ತಿದ್ದರೂ ಸಹ ಪೊಲೀಸರಿಗೆ ಕಳ್ಳರನ್ನು ಗುರುತಿಸಿ ಹಿಡಿಯಲಾಗುತ್ತಿಲ್ಲ. ರೈಲು ನಿಲ್ದಾಣದಲ್ಲಿ ಎರಡು ಮೂರು ಕಡೆಗಳಲ್ಲಿ ಕಳ್ಳರ ಭಾವಚಿತ್ರಗಳನ್ನು ಪ್ರಕಟಿಸಲಾಗಿದ್ದು ಪ್ರಯಾಣಿಕರು ಎಚ್ಚರದಿಂದಿರುವಂತೆ ಸೂಚಿಸಲಾಗಿದೆ. ಆದರೂ ಸಹ ಕಳ್ಳತನ ಪ್ರಕರಣಗಳು ನಡೆಯುತ್ತಿರುವುದು ಮಾತ್ರ ವಿಚಿತ್ರವಾಗಿದೆ.

**ಸಿ.ಸಿ.ಕ್ಯಾಮೆರಾ ಇಲ್ಲ:**

ಗದಗ ರೈಲು ನಿಲ್ದಾಣದಲ್ಲಿ ಯಾವುದೇ ಪ್ಲಾಟಫಾರ್ಮನಲ್ಲಿ ಸಿ.ಸಿ.ಕ್ಯಾಮೆರಾ ಇಲ್ಲದಿರುವುದು ಕಳ್ಳರಿಗೆ ವರದಾನವಾಗಿ ಪರಿಣಮಿಸಿದೆ. ರೈಲು ನಿಲ್ದಾಣದಲ್ಲಿ ಸಿ.ಸಿ.ಕ್ಯಾಮೆರಾ ಅಳವಡಿಸಿ ಕಳ್ಳರ ಹಾವಳಿಗೆ ಕಡಿವಾಣ ಹಾಕುವಂತೆ ವಿವಿಧ ಸಂಘ ಸಂಸ್ಥೆಗಳು ರೇಲ್ವೇ ಇಲಾಖೆಗೆ ಮಾಡಿರುವ ಮನವಿಗಳಿಗೆ ರೇಲ್ವೇ ಅಧಿಕಾರಿಗಳು ಜಾಣಕುರುಡು ನೀತಿಯನ್ನು ಅನುಸರಿಸುತ್ತಿದ್ದಾರೆ.

**ಸಿ.ಸಿ.ಕ್ಯಾಮೆರಾ ಅಳವಡಿಸಿ**

ಗದಗ ರೈಲು ನಿಲ್ದಾಣದಲ್ಲಿ ಕಳ್ಳತನ ಪ್ರಕರಣಗಳಿಗೆ ಕಡಿವಾಣ ಹಾಕಲು ಎಲ್ಲ ಪ್ಲಾಟ್‌ಫಾರ್ಮಗಳಲ್ಲಿ ಸಿ.ಸಿ.ಕ್ಯಾಮೆರಾ ಅಳವಡಿಸುವಂತೆ ಕೋರಿ ಅನೇಕ ಬಾರಿ ಮನವಿ ಮಾಡಿದ್ದೇವೆ. ಆದರೆ ರೇಲ್ವೆ ಅಧಿಕಾರಿಗಳು ನಮ್ಮ ಮನವಿಗೆ ಕ್ಯಾರೆ ಅನ್ನುತ್ತಿಲ್ಲ. ಕೂಡಲೇ ಗದಗ ರೈಲು ನಿಲ್ದಾಣದ ಎಲ್ಲ ಪ್ಲಾಟಫಾರ್ಮಗಳಲ್ಲಿ ಸಿ.ಸಿ.ಕ್ಯಾಮೆರಾ ಅಳವಡಿಸುವ ಮೂಲಕ ಕಳ್ಳತನ ಪ್ರಕರಣಗಳನ್ನು ತಡೆಯಬೇಕು.

**-ಗಣೇಶಸಿಂಗ್ ಬ್ಯಾಳಿ**
**ಅಧ್ಯಕ್ಷರು, ಬೆಟಗೇರಿ ರೇಲ್ವೇ ಹೋರಾಟ ಸಮಿತಿ. ಗದಗ.**

+ Gdg railway station Theft cases were increasing so SWR have to ensure — Passenger saftey.